


ಮಡಿಕೆಯೊಂದನ್ನು ಕೊಂಡುತರುವಂತೆ ಅಮ್ಮ ಆತನಲ್ಲಿ ಹೇಳಿದ್ದಳು. ಪ್ರತಿಸಲವೂ ವ್ಯಾಪಾರಕ್ಕಾಗಿ ಮನೆ ಮನೆ ತಿರುಗಿ ಬರುವವನಿಗೆ ಅದೇಕೋ ತರುವುದಾಗಿರಲಿಲ್ಲ. "ಈ ಸಲ ತರದೆಹೋದ್ರೆ ನಿನ್ನ ಹೆಸರನ್ನೆ ಇನ್ನು 'ಮಡಿಕೆ ಸೇಕಾಲಿ' ಅಂತ ಕರೀತೇನೆ'' ಎಂದು ಅಣ್ಣ – ನಾನೂ ಹೆದರಿಸುತ್ತಿದ್ದೆವು. "ಅಯ್ಯೋ ಬೇಡಪ್ಪ, ಮುಂದಿನವಾರ ಗ್ಯಾರಂಟಿ'' ಅಂತಂದು ನಡೀತಾಇದ್ದ. ಕೊನೆಗೂ ತಂದ ಆ ಕೆಂಪು ಮಣ್ಣಿನ ಮಡಿಕೆ ಒಡನೆಯೇ ಅಮ್ಮನ ಅಂತಿಮಯಾತ್ರೆಗೆ ಬಳಕೆಯಾದಾಗ ಈ ಸೇಕಾಲಿ ಎದೆಬಡಿದುಕೊಂಡು ರೋದಿಸಿದ ಚಿತ್ರ ಎಂದೂ ಮರೆಯುವಂತಿಲ್ಲ.

ಜೀವನಪ್ರೀತಿ ಅಂದರೆ ಇದ್ದುದನ್ನು ಇದ್ದಂತೆಯೇ ಅನುಭವಿಸುವ ಸ್ವಂತ ಸಾಧ್ಯತೆಯಲ್ವೆ? ಮಳೆ– ಚಳಿ– ಬಿಸಿಲುಗಳನ್ನು ಒಂದೇ ರೀತಿಯಾಗಿ ಬಳಸಿಕೊಂಡು ಅಮ್ಮ ಬದುಕು ಮಾಡಿದ್ದಳು. ಮನೆಗೆ ಬರುವ ಎಲ್ಲರನ್ನೂ ಒಂದೇರೀತಿ ಅಂಗೀಕರಿಸಿ ಸ್ವಂತದ ಸೀಲು ಒತ್ತಿರುತ್ತಿದ್ದಳು. ತಾನು ಮನೆಯಲ್ಲೇ ಕುಟ್ಟಿ ತಯಾರಿಸಿದ ಅವಲಕ್ಕಿ ಮಾರುವುದಕ್ಕೆ ಮನೆ ಮನೆಗೆ ಭೇಟಿನೀಡುತ್ತಿದ್ದ ಮುದುಕಿ ಬಾಯಮ್ಮ ಸಂಜೆಯ ಪೇಪರಿನಂತಿದ್ದಳು. ನಾಲ್ಕೂರ ಸಕಲ ಸಮಾಚಾರಗಳನ್ನು ಆರಿಸಿ ತಂದು ಬಿತ್ತರಿಸುವ ಆಕೆಯ ಮುಖವೂ ಮುದುಡಿ ಬಿಡಿಸಿದ ಪೇಪರಿನಂತಿತ್ತು. ಆ ಸುಕ್ಕುಗಳ ಹಿಂದೆ ಉಲ್ಲಾಸದ ಎಳೆಗಳು ಅವಿತಿದ್ದು ಚಿಕ್ಕ ಕಣ್ಣುಗಳಲ್ಲಿ ಉಕ್ಕಿ ಹರಿಯುತ್ತಿದ್ದವು. ಯಾವುದೋ ಕಂಡರಿಯದ ಊರಲ್ಲಿದ್ದ ಮಗ ಎಂದೋ ಬಂದಾಗ ತನ್ನ ಕುಡಿತಕ್ಕಾಗಿ ಮಿಕ್ಕುಳಿದ ಒಂದಿಷ್ಟು ಕಾಸನ್ನು ಈ ತಾಯಿಯ ಕೈಗಿಟ್ಟು